



# ಡಿಸ್ನಿ ಕ್ರಿಸ್‌ಮಸ್ ಟ್ರೀ!

ಈ ಕ್ರಿಸ್‌ಮಸ್ ಟ್ರೀಯನ್ನು ಗಮನಿಸಿ. ಇದು ಬಣ್ಣ ಬಣ್ಣದ ರಿಬ್ಬನ್, ಬೇಗಡೆ, ವಿದ್ಯುತ್ ದೀಪಗಳಿಂದ ಅಲಂಕರಣಗೊಳಿಸಿದ ಮಾಮೂಲಿ ಕ್ರಿಸ್‌ಮಸ್ ಟ್ರೀ ಅಲ್ಲ. ಬದಲಾಗಿ ಗೊಂಬೆಗಳಿಂದಲೇ ನಿರ್ಮಿತವಾದ ವಿಶೇಷ ಕ್ರಿಸ್‌ಮಸ್ ಮರ. ಅದೂ ಡಿಸ್ನಿ ಗೊಂಬೆಗಳಿಂದ ಕೂಡಿದ ಮರ!

ಲಂಡನ್‌ನ ಸೇಂಟ್ ಪ್ಯಾಂಕ್ರಾಸ್ ರೈಲು ನಿಲ್ದಾಣದಲ್ಲಿ ಮೂರು ವರ್ಷ ಹಿಂದೆ ಕ್ರಿಸ್‌ಮಸ್ ಹಬ್ಬದ ಸಮಯದಲ್ಲಿ ಮೆತ್ತ ಮೆತ್ತನೆಯ ಗೊಂಬೆಗಳಿಂದಲೇ ಕ್ರಿಸ್‌ಮಸ್ ಮರವನ್ನು ನಿರ್ಮಿಸಲಾಗಿತ್ತು. ಟೀವಿ ಸೀರಿಯಲ್ ಹಾಗೂ ಸಿನಿಮಾಗಳಲ್ಲಿ ಬರುವ ಮಿಕ್ಕಿ ಮೌಸ್, ಮಿನಿ ಮೌಸ್, ವಿನ್ನಿ, ಏರಿಯಲ್, ಡಂಬೊ ಮುಂತಾದ ಡಿಸ್ನಿ ಪಾತ್ರಗಳ ಗೊಂಬೆಗಳನ್ನು ಥೇಟ್ ಕ್ರಿಸ್‌ಮಸ್ ಮರ ಕಾಣುವ ರೀತಿಯಲ್ಲಿಯೇ ಸುಂದರವಾಗಿ ಪೇರಿಸಲಾಗಿತ್ತು.

ಮರದ ತುದಿಯಲ್ಲಿ ಒಂದು ಮೀಟರ್‌ನಷ್ಟು ಮಿಕ್ಕಿ ಮೌಸ್ ಅನ್ನು ಕೂರಿಸಲಾಗಿತ್ತು. ಅಷ್ಟೇ ಅಲ್ಲ, ಮರದ ತುದಿಯಿಂದ ಪ್ರತೀ ನಾಲ್ಕು ನಿಮಿಷಕ್ಕೊಮ್ಮೆ ಮಂಜಿನ ತುಣುಕುಗಳು ಕೆಳಕ್ಕೆ ಬೀಳುವಂತೆ ಹಾಗೆಯೇ ಬೀಳುತ್ತಲೇ ಕರಗಿ ಹೋಗುವಂತೆ ಮ್ಯಾಜಿಕ್ ಅನ್ನು ಸೃಷ್ಟಿಸಲಾಗಿತ್ತು! ಬರೋಬ್ಬರಿ 14 ಮೀಟರ್ ಎತ್ತರವಾದ ಈ ವಿಶಿಷ್ಟ ಕ್ರಿಸ್‌ಮಸ್ ಮರ ಇಡೀ ಪ್ರಪಂಚದಲ್ಲೇ ದೊಡ್ಡದಾದ ಡಿಸ್ನಿ ಜೂನಿಯರ್ ಸಾಫ್ಟ್ ಟ್ರೀ ಎಂಬ ಖ್ಯಾತಿ ಪಡೆದುಕೊಂಡಿದೆ. ಹಬ್ಬದ ಪ್ರದರ್ಶನದ ನಂತರ ಎಲ್ಲಾ ಗೊಂಬೆಗಳನ್ನು ಬಡ ಮಕ್ಕಳಿಗೆ ದಾನವಾಗಿ ನೀಡಲಾಯಿತಂತೆ.

■ ವಿದ್ಯಾ ವಿ. ಹಾಲಭಾವಿ

